# ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 16-12-2022

**ಗಾಂಧಿಗಂಜ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 190/2022 ಕಲಂ 307, 504, ಐಪಿಸಿ ಜೊತೆ 3(2)(V), 3(2)(v-a) Sc/st PA Act-1989 :-**

**ದಿನಾಂಕ: 15-12-2022 ರಂದು ಸಾಯಂಕಾಲ 05:40 ಗಂಟೆಗೆ ಬೀದರ ಸರಕಾರಿ ಆಸ್ಪತ್ರೆಯಿಂದ ಮಾಹಿತಿ ಬಂದ ಮೇರೆಗೆ ಆಸ್ಪತ್ರೆಗೆ ಬೇಟಿ ನೀಡಿ ಎಮ್.ಎಲ್.ಸಿ ಪತ್ರ ಸೀಕರಿಸಿಕೊಂಡು ಉಪಚಾರ ಪಡೆಯುತ್ತಿದ್ದ ಗಾಯಾಳು ಲಿಮಿಶಾ ಗಂಡ ತುಕರಾಮ ಗಾಯಕವಾಡ ಇವಳಿಗೆ ನೋಡಲು ಮಾತಾನಾಡುವ ಸ್ಥಿತಿಯಲ್ಲಿ ಇಲ್ಲದ ಕಾರಣ ಅಲ್ಲೆ ಹಾಜರಿದ್ದ ಗಾಯಾಳುವಿನ ಗಂಡನಾದ ತುಕಾರಾಮ ತಂದೆ ವಿಠಲರಾವ ಗಾಯಕವಾಡ, ವಯಸ್ಸ: 41 ವಷ, ಜಾತಿ: ಹೊಲೆಯಾ, ಉದ್ಯೋಗ: ಏರ್ಪೋರ್ಸನಲ್ಲಿ ಸೆಕ್ಯೂರೆಟಿ ಗಾರ್ಡ್, ಸಾ: ಆನಂದ ನಗರ ಬೀದರ ಈತನ ಹೇಳಿಕೆ ಪಡೆಯಲಾಗಿ ಅದರ ಸಾರಾಂಶವೇನೆಂದರೆ ಫಿರ್ಯಾದಿ ಹೆಂಡತಿಯಾದ ಲಿಮಿಶಾ ಗಾಯಕವಾಡ ಇವಳು ಬೀದರ ನ್ಯೂ ಆದರ್ಶ ಕಾಲೋನಿಯಲ್ಲಿರುವ ಮಾತೆ ಮಾಣಿಕೇಶ್ವರಿ ಶಾಲೆಯ ಹತ್ತಿರ ಬ್ಯೂಟಿ ಫಾರ್ಲರ್ ಅಂಗಡಿ ಇಟ್ಟುಕೊಂಡು ಕೆಲಸ ಮಾಡುದ್ದಾಳೆ. ಹೀಗಿರುವಾಗ ದಿನಾಂಕ: 15-12-2022 ರಂದು ಸಾಯಂಕಾಲ 05:00 ಗಂಟೆ ಸುಮಾರಿಗೆ ಲಿಮಿಶಾ ಇವಳಿಗೆ ಪವನ ಗೌಳಿ ಈತನು ಅಂಗಡಿಗೆ ಬಂದು ಹೊಡೆದಿದ್ದರಿಂದ ಬಲ ಬೆನ್ನನಲ್ಲಿ ಭಾರಿ ರಕ್ತಗಾಯವಾಗಿ ರಕ್ತ ಹರಿಯುತ್ತಿತ್ತು ಪವನ ತಂದೆ ರಾಮಕುಮಾರ ಬಿಡ್ಕರ್ ಗೌಳಿ, ಸಾ: ಲಾಡಗೇರಿ ಬೀದರ ಈತನು ಅಂಗಡಿಗೆ ಬಂದು ವಿನಾಕಾರಣ ಜಗಳ ತೆಗೆದು ಅವಾಚ್ಯವಾಗಿ ಬೈದು ಅಂಡಿಯಲ್ಲಿದ್ದ ಕತ್ತರಿಯಿಂದ ಹೊಡೆದಿರುತ್ತಾನೆ ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.**

ಮನ್ನಾಏಖೇಳ್ಳಿ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 131/2022 ಕಲಂ 420, 409 ಐಪಿಸಿ :-

ದಿನಾಂಕ: 15/12/2022 ರಂದು 11:00 ಗಂಟೆಗೆ ಫಿರ್ಯಾದಿ ಶ್ರೀ ವೆಂಕಟೇಶ್ ತಂದೆ ಶಿವಲಿಂಗಪ್ಪಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹುಮನಾಬಾದ ಜಿಲ್ಲಾ||ಬೀದರ ರವರು ಠಾಣೆಗೆ ದೂರು ನೀಡಿದರ ಸಾರಂಶವೇನೆAದರೆ ಶ್ರೀ ರಾಜೀವ ಹಿಂದಿನ ಪ್ರಭಾರಿ ಮುಖ್ಯಗುರುಗಳು ಸರ್ಕಾರಿ ಮಾ.ಪ್ರಾ.ಶಾಲೆ ತಾಳಮಾಡಗಿ (ಸದ್ಯ ಸರ್ಕಾರಿ ಮಾದರಿಯ ಪ್ರಾಥಮಿಕ ಶಾಲೆ, ಮನ್ನಾ-ಎ-ಖೆಳ್ಳಿ ತಾ.ಹುಮನಾಬಾದ) ಜಿ||ಬೀದರ ರವರು ಈ ಹಿಂದೆ ಸರ್ಕಾರಿ ಮಾ.ಪ್ರಾ.ಶಾಲೆ ತಾಳಮಡಗಿ ತಾ|| ಹುಮನಾಬಾದ ಶಾಲೆಯಲ್ಲಿ ಪ್ರಭಾರಿ ಮುಖ್ಯಗುರುಗಳಾಗಿ ಕರ್ತವ್ಯ ನಿರ್ವಹಿಸುತ್ತಿರುವ ಅವಧಿಯಲ್ಲಿ ರಾಷ್ಟ್ರೀAಯ ಹೆದ್ದಾರಿ ಕಾಮಗಾರಿಯಲ್ಲಿ ತಾಳಮಡಗಿ ಗ್ರಾಮದ ಶಾಲೆಯ ಕಟ್ಟಡ ಹಾಗು ನಿವೇಶನ ಹೋಗಿದಕ್ಕೆ ರಾಷ್ಟ್ರೀAಯ ಹೆದ್ದಾರಿ ಪ್ರಾಧಿಕಾರದಿಂದ ಶ್ರೀ ರಾಜೀವ ಹಿಂದಿನ ಪ್ರ.ಮು.ಶಿ ಹಾಗು ಎಸ್.ಡಿ.ಎಂ.ಸಿ ಅಧ್ಯಕ್ಷರಾದ ಶ್ರೀ ರಾಜಕುಮಾರ ಭಾವಿದೊಡ್ಡಿ ರವರ ಜಂಟಿ ಬ್ಯಾಂಕ ಖಾತೆಗೆ ಹಾಗು ಮುಖ್ಯ ಶಿಕ್ಷಕರ ಬ್ಯಾಂಕ ಖಾತೆಗೆ ಒಟ್ಟು 19,71,105=00 ರೂ ಪರಿಹಾರದ ಮೊತ್ತವನ್ನು ಜಮೆಯಾಗಿದ್ದು, ಸದರಿ ಹಣವನ್ನು ನಿಯಮಬಾಹಿರವಾಗಿ ಸರಕಾರದ ಹಣವನ್ನು ಸೇಲ್ಪ್ ಹಾಗು ಚೆಕ್ ಮುಖಾಂತರ ಬ್ಯಾಂಕಿನಿAದ ಹಣ ದುರುಪಯೋಗ ಮಾಡಿಕೊಂಡಿರುತ್ತಾರೆ. ಹಣಕಾಸಿನ ದುರ್ಬಳಕೆಗೆ ಸಂಬAಧಿಸಿದAತೆ ಉಪನಿರ್ದೇಶಕರು ಆಡಳಿತ ಸಾರ್ವಜನಿಕ ಶಿಕ್ಷಣ ಇಲಾಖೆ ಬೀದರ ಇವರ ಕಛೇರಿಯ ಪರಿಣಿತ ಲೆಕ್ಕಾಧೀಕ್ಷಕರಿಂದ ಸಮಗ್ರ ಹಣಕಾಸಿನ ತಪಾಸಣೆ ತಂಡ ನೇಮಿಸಿ ಸದರಿ ತಪಾಸಣೆಗೆ ಖುದ್ದಾಗಿ ಶಾಲೆಗೆ ಹಾಜರಾಗಿ ಅಗತ್ಯ ದಾಖಲೆಗಳು ತಪಾಸಣೆ ಮಾಡಿ ವರದಿ ಸಲ್ಲಿಸಿರುತ್ತಾರೆ. ನಂತರ ಶ್ರೀ ರಾಜೀವ ಹಿಂದಿನ ಪ್ರಭಾರಿ ಮು.ಶಿ. ರವರು ಶಾಲೆಗೆ ಹಾಜರಾಗಿರುವುದಿಲ್ಲಾ. ಪ್ರಯುಕ್ತ ಎಸ್.ಬಿ.ಐ. ಹುಮನಾಬಾದನಲ್ಲಿ ಸದರಿ ಶಾಲೆಯ ಬ್ಯಾಂಕ ಖಾತೆಗಳಾದ ಮುಖ್ಯ ಶಿಕ್ಷಕರು ಹಾಗೂ

ಎಸ್.ಡಿ.ಎಂ.ಸಿ. ಜಂಟಿ ಖಾತೆ ಸಂಖ್ಯೆ: 62198460914 ಹಾಗೂ ಮುಖ್ಯ ಶಿಕ್ಷಕರ ಬ್ಯಾಂಕ ಖಾತೆ ಸಂಖ್ಯೆ: 52074918870 ಖಾತೆಗಳಿಗೆ ಸಂಬAಧಿಸಿದAತೆ ಬ್ಯಾಂಕಿಗೆ ಸಂಪರ್ಕಿಸಿ ಈ ಎರಡು ಬ್ಯಾಂಕ ಖಾತೆಗಳಿಂದ ಸದರಿ ಪ್ರಭಾರಿ ಮುಖ್ಯ ಶಿಕ್ಷಕರು ಮಾಡಿದ ಹಣಕಾಸಿನ ವ್ಯವಹಾರದ ಕುರಿತು ಬ್ಯಾಂಕ ಸ್ಟೇಟಮೆಂಟ್ ಮತ್ತು ಚೆಕ್‌ಗಳ ವಿವರದ ದಾಖಲೆಗಳನ್ನು ಸಂಗ್ರಹಿಸಲಾಗಿ ರಾಷ್ಟ್ರೀÃಯ ಹೆದ್ದಾರಿ ಕಾಮಗಾರಿಯಲ್ಲಿ ಶಾಲೆಯ ಕಟ್ಟಡ ಹಾಗೂ ನಿವೇಶನ ಹೋಗಿದಕ್ಕೆ ರಾಷ್ಟ್ರೀÃಯ ಹೆದ್ದಾರಿ ಪ್ರಾಧಿಕಾರದವರಿಂದ ಬ್ಯಾಂಕ ಖಾತೆಗೆ ಜಮೆಯಾಗಿರುತ್ತದೆ. ಈ ಪರಿಹಾರದ ಮೊತ್ತವನ್ನು ಸದರಿ ಪ್ರಭಾರಿ ಮುಖ್ಯಗುರುಗಳು ಶಾಲೆಯ ಎಸ್.ಡಿ.ಎಮ.ಸಿ. ಅಧ್ಯಕ್ಷರಾದ ಶ್ರೀ ರಾಜಕುಮಾರ ತಂದೆ ನಾಗಪ್ಪಾ ಭಾವಿದೊಡ್ಡೆ ಸಾ|| ತಾಳಮಡಗಿ ತಾ|| ಚಿಟಗುಪ್ಪಾ (ಹುಮನಾಬಾದ) ರವರೊಂದಿಗೆ ಸೇರಿಕೊಂಡು ಮುಖ್ಯ ಶಿಕ್ಷಕರು ಹಾಗೂ ಎಸ್.ಡಿ.ಎಂ.ಸಿ. ಜಂಟಿ ಖಾತೆ ಸಂಖ್ಯೆ: 62198460914 ಎಸ್.ಬಿ.ಐ. ಹುಮನಾಬಾದ ಖಾತೆಯಿಂದ ರೂ. 16,63,105=00 ಹಾಗೂ ಮುಖ್ಯ ಶಿಕ್ಷಕರ ಬ್ಯಾಂಕ ಖಾತೆ ಸಂಖ್ಯೆ: 52074918870 ಎಸ್.ಬಿ.ಐ ಹುಮನಾಬಾದ ರಿಂದ ರೂ.3,08,000=00ಗಳನ್ನು ನಿಯಮಬಾಹಿರವಾಗಿ ಸೇಲ್ಫ್ ಹಾಗೂ ಚೆಕ್ ಮುಖಾಂತರ ಬ್ಯಾಂಕಿನಿAದ ಹಣ ಸೆಳೆದು ದುರ್ಬಳಕೆ ಪಡಿಸಿಕೊಂಡಿರುವುದು ಕಂಡುಬAದಿರುತ್ತದೆ. ಖರ್ಚು ವೆಚ್ಚದ ಕುರಿತು ಶಾಲೆಯಲ್ಲಿ ಯಾವುದೇ ನಗದು ಪುಸ್ತಕಗಳಾಗಲಿ, ರಸೀದಿ, ಇತರೆ ದಾಖಲೆಗಳಾಗಲಿ ಲಭ್ಯವಿರುವುದಿಲ್ಲವೆಂದು ತಪಾಸಣಾ ವರದಿ ಸಲ್ಲಿಸಿರುತ್ತಾರೆ. ಆದ್ದರಿಂದ, ಇವರು ಓರ್ವ ಜವಾಬ್ದಾರಿಯುತ ಸರ್ಕಾರಿ ನೌಕರರಾಗಿ ಇವರ ಜವಾಬ್ದಾರಿಯನ್ನು ಅರಿಯದೇ ಕರ್ತವ್ಯಕ್ಕೆ ಅನಧಿಕೃತ ಗೈರುಹಾಜರಾಗಿ ಶಾಲೆಯ ಸಂಪೂರ್ಣ ಪ್ರಭಾರ ಪೂರ್ಣಕಾಲಿಕ ಮುಖ್ಯಗುರುಗಳಿಗೆ ನೀಡದೆ ನಿಯಮಬಾಹಿರವಾಗಿ ಬ್ಯಾಂಕ ಖಾತೆಯಿಂದ ರಾಷ್ಟ್ರೀÃಯ ಹೆದ್ದಾರಿ ಕಾಮಗಾರಿಯಲ್ಲಿ ಶಾಲೆಯ ಕಟ್ಟಡ ಹಾಗೂ ನಿವೇಶನ ಹೋಗಿದ್ದಕ್ಕೆ ರಾಷ್ಟ್ರೀÃಯ ಹೆದ್ದಾರಿ ಪ್ರಾಧಿಕಾರದವರಿಂದ ಬ್ಯಾಂಕ ಖಾತೆಗೆ ಜಮೆಯಾದ ಪರಿಹಾರದ ಮೊತ್ತವನ್ನು ಶಾಲೆಯ ಎಸ್.ಡಿ.ಎಮ್.ಸಿ. ಅಧ್ಯಕ್ಷರಾದ ಶ್ರೀ ರಾಜಕುಮಾರ ತಂದೆ ನಾಗಪ್ಪಾ ಭಾವಿದೊಡ್ಡೆ ಸಾ|| ತಾಳಮಡಗಿ ತಾ|| ಚಿಟಗುಪ್ಪಾ (ಹುಮನಾಬಾದ) ರವರೊಂದಿಗೆ ಸೇರಿಕೊಂಡು ನಿಯಮಬಾಹಿರವಾಗಿ ಮುಖ್ಯ ಶಿಕ್ಷಕರು ಹಾಗೂ ಎಸ್.ಡಿ.ಎಂ.ಸಿ. ಜಂಟಿ ಖಾತೆ ಸಂಖ್ಯೆ: 62198460914 ಎಸ್.ಬಿ.ಐ. ಹುಮನಾಬಾದ ಖಾತೆಯಿಂದ ರೂ. 16,63,105=00 ಹಾಗೂ ಮುಖ್ಯ ಶಿಕ್ಷಕರ ಬ್ಯಾಂಕ ಖಾತೆ ಸಂಖ್ಯೆ: 52074918870 ಎಸ್.ಬಿ. ಐ ಹುಮನಾಬಾದ ರಿಂದ ರೂ. 3,08,000=00 ಹೀಗೆ ಒಟ್ಟು 19,71,105=00 (ರೂ. ಹತ್ತೊ೦ಬತ್ತು ಲಕ್ಷ ಎಪ್ಪತೊಂದು ಸಾವಿರ ಒಂದು ನೂರಾ ಐದು ಮಾತ್ರ) ನ್ನು ನಿಯಮಬಾಹಿರವಾಗಿ ಸರ್ಕಾರದ ಹಣ ಸೇಲ್ಫ್ ಹಾಗೂ ಚೆಕ್ ಮುಖಾಂತರ ಬ್ಯಾಂಕಿನಿAದ ಹಣ ಸೆಳೆದು ದುರ್ಬಳಕೆ ಪಡಿಸಿಕೊಂಡು ಇವರು ತಮ್ಮ ಕರ್ತವ್ಯದಲ್ಲಿ ಕರ್ತವ್ಯಲೋಪ, ನಿರ್ಲಕ್ಷತೆ ಹಾಗೂ ದುರ್ನಡತೆ ಎಸಗಿ ಗಂಭೀರ ಸ್ವರೂಪದ ಆರೋಪಕ್ಕೆ ಗುರಿಯಾಗಿ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 2021ರ ಉಪನಿಯಮ 3 ಉಲ್ಲಂಘನೆಗೆ ಗುರಿಯಾಗಿರುತ್ತಾರೆ. ದುರುಪಯೋಗ ಪಡಿಸಿಕೊಂಡ ಸರ್ಕಾರದ ಒಟ್ಟು ರೂ. 16,63,105=00+ 3,08,000=00 =19,71,105=00 (ರೂ. ಹತ್ತೊ೦ಬತ್ತ ಲಕ್ಷ ಎಪ್ಪತೊಂದು ಸಾವಿರ ಒಂದು ನೂರಾ ಐದು ಮಾತ್ರ) ಶೇಕಡಾ 8% ರ ಬ್ಯಾಂಕ ಬಡ್ಡಿಯೊಂದಿಗೆ ಸಂಬAಧಪಟ್ಟ ಬ್ಯಾಂಕ ಖಾತೆಗೆ ಜಮೆ ಮಾಡಿ ಬ್ಯಾಂಕ ಸ್ಲೀಪನೊಂದಿಗೆ ವರದಿ ಮಾಡಲು ಸದರಿ ಪ್ರ.ಮು ಶಿಕ್ಷಕರಿಗೆ ಹಾಗೂ ಎಸ್.ಡಿ.ಎಮ್.ಸಿ ಅಧ್ಯಕ್ಷರಿಗೂ ಉಪನಿರ್ದೇಶಕರು ಆಡಳಿತ ಸಾರ್ವಜನಿಕ ಶಿಕ್ಷಣ ಇಲಾಖೆ ಬೀದರ ಇವರ ಕಛೇರಿಯ ಮುಖಾಂತರ ನೋಟಿಸ್ ಜಾರಿ ಮಾಡಿರುತ್ತಾರೆ. ಆದರೆ ಸಂಬAದಪಟ್ಟ ನೌಕರರಿಂದ ಇಲ್ಲಿವರೆಗೆ ಆರೋಪ ಪಟ್ಟಿಗೆ ಲಿಖಿತ ಹೇಳಿಕೆಯಾಗಲಿ ಅಥವಾ ದುರ್ಬಳಕೆ ಪಡಿಸಿಕೊಂಡ ಹಣ ಸಂಬAಧಪಟ್ಟ ಬ್ಯಾಂಕ ಖಾತೆಗೆ ಜಮೆ ಮಾಡಿ ಬ್ಯಾಂಕ ಸ್ಲೀಪನೊಂದಿಗೆ ವರದಿ ಮಾಡಿರುವುದಿಲ್ಲ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

## ಸಂತಪೂರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 127/2022 ಕಲಂ 78(3) ಕೆ ಪಿ ಎಕ್ಟ್ :-

ದಿನಾಂಕ 15/12/2022 ರಂದು 1230 ಗಂಟೆಗೆ ಪಿಎಸ್ಐ ರವರು ಠಾಣೆಯಲ್ಲಿದ್ದಾಗ ಬೀದರ-ಔರಾದ(ಬಿ) ರೋಡಿನ ಸಂತಪೂರ ಗ್ರಾಮದ ಬಸ ನಿಲ್ದಾಣದ ಹತ್ತಿರ ರಸ್ತೆಯ ಮೇಲೆ ಸಾರ್ವಜನಿಕ ಸ್ಥಳದಲ್ಲಿ ಒಬ್ಬ ವ್ಯಕ್ತಿಯು ಸಾರ್ವಜನಿಕರಿಂದ ಹಣ ಪಡೆದು ಮಟಕಾ ಚೀಟಿ ಬರೆದುಕೊಳ್ಳುವ ಚಟುವಟಿಕೆಯಲ್ಲಿ ತೊಡಗಿದ ಬಗ್ಗೆ ಮಾಹಿತಿ ಬಂದ ಮೇರೆಗೆ ಸಿಬ್ಬಂದಿಯೊAದಿಗೆ ಹೋಗಿ ನೋಡಿದಾಗ ಸಂತಪೂರ ಗ್ರಾಮದ ಬಸ ನಿಲ್ದಾಣದ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಸ್ವಲ್ಪ ದೂರದಲ್ಲಿ ಮರೆಯಾಗಿ ನಿಂತು ನೋಡಲಾಗಿ ಒಬ್ಬ ವ್ಯಕ್ತಿಯು ಸಾರ್ವಜನಿಕರಿಂದ ಹಣ ಪಡೆದು ಅದೃಷ್ಟದ ಸಂಖ್ಯೆಗೆ ಹಣ ಹಚ್ಚಿದರೆ 1/-ರೂ ಗೆ 80/-ರೂ 10 ರೂ ಗೆ 800/-ರೂ ಕೊಡುತ್ತೇವೆ ಎಂದು

ಹೇಳಿ ಸಾರ್ವಜನಿಕರಿಂದ ಹಣ ಪಡೆದು ಮಟಕಾ ಚೀಟಿ ಬರೆದುಕೊಳ್ಳುತ್ತಿರುವುದನ್ನು ಖಚೀತ ಪಡಿಸಿಕೊಂಡು ದಾಳಿ ಮಾಡಿ ಹಿಡಿದು ಹೆಸರು ವಿಳಾಸ ವಿಚಾರಿಸಿ ಅಂಗ ಪರಿಶಿಲನೆ.ಮಾಡಿ ನೋಡಲು ಹೆಸರು ಅಂಬಾದಾಸ ತಂದೆ ಲಕ್ಷ್ಮಿರ್ಮಣ ಡೋರ ವ, 27 ವರ್ಷ ಜಾ/ ಡೋರ್ ಉ/ವ್ಯಾಪಾರ ಸಾ/ ಸಂತಪೂರ ಅಂತ ತಿಳಿಸಿದನು ನಂತರ ಆತನ ಹತ್ತಿರ ನಗದು ಹಣ 8000/-ರೂ, ಅಂಕಿ ಸಂಖ್ಯೆ ಬರೆದ 1 ಮಟಕಾ ಚೀಟಿ,ಒಂದು ಪೆನ್ನು ಇದ್ದವು ಸದರಿಯವನು ಹಣ ಗಳಿಸುವ ಉದ್ದೇಶದಿಂದ ಸಾರ್ವಜನಿಕರಿಂದ ಅಂಕಿ ಸಂಖ್ಯೆ ಮೇಲೆ ಹಣ ಪಡೆದುಕೊಂಡು ಅದೃಷ್ಟದ ಆಟದ ಮಟಕಾ ಚೀಟಿಗಳು ಬರೆದುಕೊಳ್ಳುತ್ತಿದ್ದ ಬಗ್ಗೆ ತಿಳಿಸಿರುತ್ತಾನೆ. ಹೀಗೆ ನಗದು ಹಣ 8000/-ರೂ, 1 ಮಟಕಾ, ಚೀಟಿ 1 ಪೇನ್ನು, ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.